**ದಿನಾಂಕ: 27-06-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ VCMP ವಕೀಲರಿಂದ**

1. ಈಗ ನನಗೆ 70 ವರ್ಷ ವಯಸ್ಸು ಇರುತ್ತದೆ. ಅಪಘಾತದಲ್ಲಿ ತೀರಿಕೊಂಡಂತಹ ಸಂತೋಷ ನನ್ನ ಮಗನಾಗಬೇಕು. ಲಕ್ಕಮ್ಮರವರು ಮೃತ ಸಂತೋಷನ ತಾಯಿ ಆಗಬೇಕು. ಮೃತ ಸಂತೋಷ ಕೂಲಿ ಕೆಲಸ ಮಾಡುತ್ತಿದ್ದನು. ಸಂತೋಷನಿಗೆ ಎಷ್ಟು ಆದಾಯ ಇತ್ತು ಎಂದರೆ ತಿಂಗಳಿಗೆ 30 ಸಾವಿರ ಆದಾಯ ಬರುತ್ತಿತ್ತು. ತಿಂಗಳಿಗೆ 30 ಸಾವಿರ ಆದಾಯ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮಗನಿಗೆ ತಿಂಗಳಿಗೆ 30 ಸಾವಿರ ಆದಾಯ ಇತ್ತು ಎಂದು ಈ ಕೇಸಿಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಿಮ್ಮ ಮಗನಿಗೆ ಎಷ್ಟು ವರ್ಷ ವಯಸ್ಸಿತ್ತು ಎಂದರೆ 20 ವರ್ಷ ವಯಸ್ಸು ಇತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ಮಗನಿಗೆ 20 ವರ್ಷ ವಯಸ್ಸಿತ್ತು ಎಂದು ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮಗನ ವಯಸ್ಸು ಹೆಚ್ಚು ಇರುವುದರಿಂದ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ನಿಮ್ಮ ಮಗ ಚಲಾಯಿಸುತ್ತಿದ್ದ ವಾಹನದಲ್ಲಿ ಮತ್ತೆ ಯಾರು ಇದ್ದರು ಎಂದರೆ ನಮ್ಮ ಮಗ ಒಬ್ಬನೇ ಇದ್ದನು ಎಂದು ಉತ್ತರಿಸುತ್ತಾರೆ. ಆ ದಿನ ಎಲ್ಲಿಂದ ಎಲ್ಲಿಗೆ ಹೊರಟಿದ್ದ ಎಂದರೆ ಜೇವರ್ಗಿಗೆ ಬಂದು ಎಣ್ಣೆ ತೆಗೆದುಕೊಂಡು ಜನಿವಾರ ಗ್ರಾಮಕ್ಕೆ ಬರುತ್ತಿದ್ದನು ಎಂದು ಉತ್ತರಿಸುತ್ತಾರೆ. ನಿಮ್ಮ ಮಗನಿಗೆ ವಾಹನ ಚಾಲನಾ ಪರವಾನಿಗೆ ಇತ್ತೆ ಎಂದರೆ ಗೊತ್ತಿಲ್ಲ. ಅಪಘಾತ ಆಗುವ ಸಮಯದಲ್ಲಿ ಅಪಘಾತವಾಗುವ ಸ್ಥಳದಲ್ಲಿ ನೀವು ಇದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವಾದ ವಿಷಯ ಯಾರು ಹೇಳಿದರು ಎಂದರೆ ನನ್ನ ದೊಡ್ಡ ಮಗ ಸಿದ್ದಣ್ಣ ಹೇಳಿರುತ್ತಾನೆ ಎಂದು ಉತ್ತರಿಸುತ್ತಾರೆ. ನನ್ನ ದೊಡ್ಡ ಮಗ ಸಿದ್ದಣ್ಣ ಅಪಘಾತ ನೋಡಿದನು ಎಂದು ಹೇಳಿದನು ಎಂದು ಉತ್ತರಿಸುತ್ತಾರೆ. ನನ್ನ ಮಗನಿಗೆ ಅಪಘಾತಪಡಿಸಿದಂತಹ ವಾಹನ ಯಾವುದು ಇತ್ತು ಎಂದರೆ ಹೀರೋ ಹೊಂಡಾ ಗಾಡಿ

ಹೀರೋ ಹೊಂಡಾ ವಾಹನದ ತಪ್ಪಿನಿಂದ ಅಪಘಾತವಾಗಿಲ್ಲ ನಿಮ್ಮ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಿಮ್ಮ ಮಗನಿಗೆ ವಾಹನ ಚಲಾಯಿಸಲು ಪರವಾನಿಗೆ ಇರಲಿಲ್ಲ ಮತ್ತು ಆತ ಹೆಲ್ಮೇಟ್ ಧರಿಸಿರಲಿಲ್ಲ ಆತನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಎದುರು ವಾಹನದ ತಪ್ಪಿನಿಂದ ಅಪಘಾತ ಆಗಿಲ್ಲದೇ ಇದ್ದರೂ ಸಹ ಆತನ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

3. ಅಪಘಾತವಾದ ನಂತರ ನಿಮ್ಮ ಮಗನಾದ ಸಂತೋಷನಿಗೆ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಎಂ.ಬಿ.ಪಾಟೀಲ ಹರವಾಳ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಎಷ್ಟು ದಿನ ಇದ್ದೀರಿ ಎಂದರೆ ಮರುದಿನ ನನ್ನ ಮಗ ಸಂತೋಷ ತೀರಿಕೊಂಡಿದ್ದನು. ಆಸ್ಪತ್ರೆಯಲ್ಲಿ 25 ಸಾವಿರ ಖರ್ಚಾಗಿದೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ 25 ಸಾವಿರ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಕುಟುಂಬವನ್ನು ನೀವೇ ನಡೆಸುತ್ತಿದ್ದರೂ ಸಹ ನಿಮ್ಮ ಮಗ ಸಂತೋಷ ಮನೆಯನ್ನು ನಡೆಸುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಆಧಾರ ಇಲ್ಲದೇ ಈ ಕೇಸಿನಲ್ಲಿ ಪರಿಹಾರವನ್ನು ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಎದುರು ವಾಹನದವರ ತಪ್ಪಿಲ್ಲದೇ ಇದ್ದರೂ ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ